ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಈ ಸದನದ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಅವರ ಕಳಕಳಿ ಏನೆಂಬುದನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತರಬೇಕು. ಇದಕ್ಕೆ ಸೂಕ್ತವಾದಂತಹ ನಿರ್ಣಯವನ್ನು ತೆಗೆದುಕೊಳ್ಳುವಂಥಾದ್ದು ಅವರಿಗೆ ಬಿಟ್ಟಿದ್ದು. ಈಗ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿರುವಂತೆ, ನಿಯಮ 69ರ ಮೇಲಿನ ಚರ್ಚೆ ಏನು ಇದೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಅದಕ್ಕೆ ದಯಮಾಡಿ ತಾವುಗಳು ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು : ಈಗ ಈ ಸಭೆಯನ್ನು ನಡೆಸಬೇಕೆಂದು ಇದ್ದಿರೋ, ನಡೆಸಬಾರದು ಎಂದು ಇದ್ದಿರೊ? ಈಗ ಮಾತಾಡುವುದಕ್ಕೆ ಅವಕಾಶ ಇದೆ. ಅದಕ್ಕೆ ಯೋಗ್ಯವಾದ ಉತ್ತರವನ್ನು ಕೊಡುತ್ತಾರೆ.. ದಯಮಾಡಿ ಕುಳಿತುಕೊಳ್ಳಿ, ಸಹಕರಿಸಿ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ : ಮಾನ್ಯ ಅಧ್ಯಕ್ಷರೆ, ಕಳೆದ 15 ದಿವಸಗಳಿಂದ ಹೋರಾಟ ಮಾಡುತ್ತಿದ್ದಾರೆ. ಅಲ್ಲಿಗೆ ಮಾನ್ಯ ಜವಳಿ ಸಚಿವರು ಭೇಟಿ ಕೊಟ್ಟಿದ್ದಾರೆ, ಸಕ್ಕರೆ ಸಚಿವರೂ ಕೂಡ ಸ್ಥಳಕ್ಕೆ ಭೇಟಿ ಕೊಟ್ಟು ರೈತರ ಹೋರಾಟದಲ್ಲಿ ಭಾಗಿಯಾಗಿದ್ದರು.

ಅಧ್ಯಕ್ಷರು : ಮಾನ್ಯ ದೊಡ್ಡನಗೌಡ ಗುಂಡನಗೌಡ ಪಾಟೀಲರೆ, ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಮಾತನಾಡಿ. ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ದಿವಸಗಳಿಂದ ಚಾಮರಾಜ ನಗರದಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅಲ್ಲಿ ನೀರೆತ್ತುವ ಯಂತ್ರ ಕೆಟ್ಟು ಹೋಗಿದೆ. ನನಗೆ ಸರ್ಕಾರ ಭರವಸೆಯನ್ನು ಕೊಡುವವರೆಗೆ ಧರಣಿಯನ್ನು ಮಾಡುತ್ತೇನೆ.

ಇ. ಚಾಮರಾಜನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಒತ್ತಾಯಿಸಿ ಮಾನ್ಯ ವಾಟಾಳ್‌ನಾಗರಾಜ್‌ರವರಿಂದ ಧರಣಿ

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಬಂದು ಧರಣಿಗೆ ಕುಳಿತರು)

ಅಧ್ಯಕ್ಷರು : ನಾನು ನಿಂತಿದ್ದೇನೆ, ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

2. ನಿಯಮ **69ರ ಮೇರೆಗೆ**

ವಿಷಯ:– ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸದಿರುವುದು ಹಾಗೂ ಸತತವಾಗಿ ವಿದ್ಯುತ್ ನೀಡದಿರುವುದರಿಂದ ಉಂಟಾಗಿರುವ ತೊಂದರೆಗಳ ಬಗ್ಗೆ .

ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ಧರಣಿ ವಾಪಸ್ಸು ಪಡೆಯಬೇಕು.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಮಾನ್ಯ ಸಚಿವರು ಕುಡಿಯುವ ನೀರಿಗೆ ಸಂಬಂಧಪಟ್ಟಂತೆಯೇ ಉತ್ತರ ಕೊಡುತ್ತಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೇ, ತಮ್ಮ ಸ್ಥಾನಕ್ಕೆ ಬನ್ನಿ. ಉತ್ತರದಿಂದ ಸಮಾಧಾನವಾಗದಿದ್ದರೆ, ನಂತರ ನಾವು ನಿಮ್ಮ ಜೊತೆಗೆ ಬರುತ್ತೇವೆ, ಈಗ ನೀವು ಬನ್ನಿ.

ಶ್ರೀ ಕೆ. ಶ್ರೀನಿವಾಸಗೌಡ: ಕುಡಿಯುವ ನೀರಿನ ವಿಷಯಕ್ಕೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿರುವುದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ನನ್ನ ವಿನಂತಿ ಎಂದರೆ, ದಯವಿಟ್ಟು ಅವರು ಅವರ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಈ ಬಗ್ಗೆ ತಾವು ಆದೇಶ ಕೊಡಬೇಕು.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗ ಸಚಿವರು ಉತ್ತರ ಕೊಡುತ್ತಿದ್ದಾರೆ. ಉತ್ತರವನ್ನು ಸಮರ್ಪಕವಾಗಿ ಕೊಡಲಿಲ್ಲ ಎಂದರೆ ನಾವೂ ನಿಮ್ಮ ಜೊತೆಯಲ್ಲಿ ಬರುತ್ತೇವೆ, ಈಗ ನೀವು ಬನ್ನಿ.

ಅಧ್ಯಕ್ಷರು: ಮಾನ್ಯ ಸದಸ್ಯರು ಈ ರೀತಿ ಮಾಡುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಪರಂಪರೆಯಲ್ಲ. ನೀವು ಹಿರಿಯ ಸದಸ್ಯರು, ಇತರರಿಗೆ ಮಾರ್ಗದರ್ಶಕರಾಗಿರಬೇಕು. ಈ ರೀತಿಯಾದರೆ ಸಭೆ ನಡೆಸುವುದು ನನಗೆ ಕಷ್ಟವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಂತರ ಒಟ್ಟಿಗೆ ಧರಣಿ ಮಾಡೋಣ. ಈಗ ನೀವು ಬನ್ನಿ.

ಶ್ರೀ ಜಿ.ಎ.ಶ್ರೀರಾಮರೆಡ್ಡಿ: ಏನು ಉತ್ತರ ಕೊಡುತ್ತಾರೆಂದು ಕೇಳೋಣ ಬನ್ನಿ. ಆಮೇಲೆ ಎಲ್ಲರೂ ಒಟ್ಟಿಗೆ ಹೋಗೋಣ.

ಅಧ್ಯಕ್ಷರು: ದಯಮಾಡಿ ಎಲ್ಲರೂ ಸಹಕಾರ ಮಾಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಅಧ್ಯಕ್ಷರು: ಮಾನ್ಯ ಸಚಿವರು ಪ್ರಾರಂಭ ಮಾಡಿ.

ಶ್ರೀ ಬಿ.ಸತ್ಯನಾರಾಯಣ(ಗ್ರಾಮೀಣ ನೀರು ಸರಬರಾಜು ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು, ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ಶ್ರೀ ರಾಮರೆಡ್ಡಿಯವರು, ಜಯಪ್ರಕಾಶ ಹೆಗ್ಡೆಯವರು, ಹಿರಿಯರಾದ ರಮೇಶ್ ಕುಮಾರ್‌ರವರು ಇವರೆಲ್ಲರೂ ರಾಜ್ಯದಲ್ಲಿರುವ ಬರಗಾಲದ ಹಿನ್ನಲೆಯಲ್ಲಿ, ಅಂತರ್ಜಲ ಕುಸಿದಿರುವ ಸಂದರ್ಭದಲ್ಲಿ, ರಾಜ್ಯದಲ್ಲಿ ಕುಡಿಯುವ ನೀರಿನ ತೊಂದರೆ ವ್ಯಾಪಕವಾಗಿ ಪ್ರಾರಂಭವಾಗಿದೆ ಎನ್ನುವ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ತಂದಿದ್ದು, ಅದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ,ಹೊಸದಾಗಿ ಮಂತ್ರಿಯಾದ ನನಗೆ ಎಲ್ಲಾ ರೀತಿಯ ಸಲಹೆ ಸಹಕಾರಗಳನ್ನು ಕೊಟ್ಟು, ನನಗೆ ಒಂದು ಒಳ್ಳೆಯ ಅವಕಾಶವನ್ನು ಕೊಟ್ಟಿದ್ದಾರೆ. ಅಧ್ಯಕ್ಷರಾದ ತಾವೂ ಸಹ ಇದರ ಮಹತ್ವವನ್ನು ಅರಿತುಕೊಂಡು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಹಾಗಾಗಿ ತಮಗೂ ಸಹ ವಂದಿಸುತ್ತಿದ್ದೇನೆ. ಇವತ್ತು ರಾಜ್ಯದಲ್ಲಿನ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿಜವಾಗಿಯೂ ಒಂದು ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿರುವುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿದೆ. ಇದನ್ನು ನಾವು ಎರಡು ರೀತಿಯಲ್ಲಿ ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದೇವೆ. ಈಗ ಸಧ್ಯದಲ್ಲಿ ಕುಡಿಯುವ ನೀರಿಗೆ ಏನು

ತೊಂದರೆಯಾಗಿದೆ, ಆ ತಾತ್ಕಾಲಿಕ ತೊಂದರೆಗಳನ್ನು ನಿವಾರಣೆ ಮಾಡಲು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದರ ಜೊತೆಗೆ, ದೀರ್ಘಕಾಲಿಕ ಸಮಸ್ಯೆಗಳನ್ನು ಬಗೆಹರಿಸಲು ನಾವು ಕ್ರಮಗಳನ್ನು ತೆಗೆದುಕೊಳ್ಳಲು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದೇವೆ. ಮೊದಲನೆಯದಾಗಿ, ನಾನು ಮಂತ್ರಿಯಾದ ತಕ್ಷಣವೇ, ದಿನಾಂಕ 06–01–05ರಂದು ನಾನು ಮತ್ತು ಆರ್.ಡಿ.ಪಿ.ಆರ್. ಮಿನಿಸ್ಟರ್ ಆದ ಡಾ: ಹೆಚ್. ಸಿ. ಮಹದೇವಪ್ಪನವರು ಸೇರಿ ರಾಜ್ಯದ ಎಲ್ಲಾ ಸಿ.ಇ.ಓ.ಗಳನ್ನು ಬೆಂಗಳೂರಿಗೆ ಕರೆಸಿ, ಕುಡಿಯುವ ನೀರಿನ ಬಗ್ಗೆ ಹೆಚ್ಚು ಮಹತ್ವ ಕೊಟ್ಟು ಒಂದು ಸಭೆಯನ್ನು ನಡೆಸಿದೆವು. ಅದಾದನಂತರ, ದಿನಾಂಕ 11–02–05ರಂದು ಮತ್ತು 18–01–05ರಂದು ಗುಲ್ಬರ್ಗ ಮತ್ತು ಮೈಸೂರು ವಿಭಾಗಗಳ ವಿಭಾಗೀಯ ಮಟ್ಟದ ಸಭೆಯನ್ನು ಕರೆದು ಚರ್ಚೆ ಮಾಡಿದ್ದೇವೆ. ಹಾಗಾಗಿ, ಇವತ್ತು ಕುಡಿಯುವ ನೀರಿನ ಸಮಸ್ಯೆ ಏನಿದೆ, ಈ ಬರಗಾಲದ ಹಿನ್ನಲೆಯಲ್ಲಿ, ಹೆಚ್ಚು ಅಂತರ್ಜಲ ಬಳಕೆಯಾಗಿರತಕ್ಕಂಥ ಸಂದರ್ಭದಲ್ಲಿ, ನಾವು ಒಂದು ಟಾಸ್ಕ್ ಫೋರ್ಸ್ ಮಾಡಬೇಕು ಎಂದು ತೀರ್ಮಾನ ಮಾಡಿ ದಿನಾಂಕ 12–01–05ರಂದು ಒಂದು ಸುತ್ತೋಲೆ ಹೊರಡಿಸಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ನಿರ್ವಹಣೆಯ ಬಗ್ಗೆ ಮೇಲ್ವಿಚಾರಣಾ ಸಮಿತಿಯನ್ನು ತಾಲ್ಲೂಕು ಮಟ್ಟದಲ್ಲಿ ಈಗಾಗಲೇ ರಚಿಸಿದ್ದೇವೆ. ಅದರಲ್ಲಿ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಮೇಲ್ವಿಚಾರಕರಾಗಿರುತ್ತಾರೆ, ಸಹಾಯಕ ಕಾರ್ಯಪಾಲಕ ಇಂಜಿನಿಯರುಗಳು ತಾಲ್ಲೂಕು ಮಟ್ಟದಲ್ಲಿ ಇರುತ್ತಾರೆ, ಸಂಬಂಧಿಸಿದ ತಾಲ್ಲೂಕುಗಳ ತಹಶೀಲ್ದಾರ್‌ರವರು ಇರುತ್ತಾರೆ, ಇವರುಗಳ ಜೊತೆಗೆ ಜಿಯಾಲಿಜಿಸ್ಟ್ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಅಧಿಕಾರಿಗಳು ಇರುತ್ತಾರೆ. ಈ ಐದು ಜನಗಳ ಸಮಿತಿಗೆ ನಾವು ಪೂರ್ಣವಾದ ಒಂದು ಅಧಿಕಾರವನ್ನು ಕೊಟ್ಟು, ತಕ್ಷಣವೇ ಅವರು.....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಟಾಸ್ಕ್ ಫೋರ್ಸಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಾವು ಸತತವಾಗಿ ಒತ್ತಾಯ ಮಾಡುತ್ತಿದ್ದೇವೆ. ನಾವು ಇಷ್ಟೆಲ್ಲಾ ಒತ್ತಾಯ ಮಾಡಿದರೂ ಕೂಡ ಮತ್ತೆ ನೀವು ಸಿ.ಇ.ಓ.ಗಳನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆ, ಎ.ಇ.ಇ.ಗಳನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ, ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಬಿ.ಸತ್ಯನಾರಾಯಣ: ಅವರನ್ನು ಅಧ್ಯಕ್ಷರನ್ನಾಗಿ ಮಾಡಿ.

ಒಬ್ಬ ಮಾನ್ಯ ಸದಸ್ಯರು: ಇದರಲ್ಲಿ ಶಾಸಕರ ಪಾತ್ರವೇನು? ಇದನ್ನು ನಾವು ಒಪ್ಪುವುದಿಲ್ಲ.

(ಗೊಂದಲ)

(ವಿರೋಧ ಪಕ್ಷಗಳ ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು: ಆಯಿತು , ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಹಾಗಾದರೆ ಶಾಸಕರ ಕೆಲಸವೇನು? ಅವರವರೇ ತೀರ್ಮಾನ ಮಾಡುವುದಾದರೆ ಶಾಸಕರ ಕೆಲಸವೇನು?

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನೀವು ನಿಮ್ಮ ವಿಚಾರಗಳನ್ನು ಹೇಳಿದ್ದೀರಿ, ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಶಾಸಕರಿಗೆ ಇವರು ಅವಮಾನ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಬೇಕು. ಈ ತರಹ ಎಲ್ಲರೂ ನಿಂತುಕೊಂಡರೆ ಸಭೆ ನಡೆಯುವುದು ಹೇಗೆ? ಮಾನ್ಯ ಈಶ್ವರಪ್ಪನವರೇ, ನೀವೆಲ್ಲಾ ಸದಸ್ಯರು ಎದ್ದುನಿಂತು ನಿಮ್ಮ ಭಾವನೆಗಳನ್ನು ವ್ಯಕ್ತಮಾಡಿದ್ದೀರಿ. ಅದಕ್ಕೆ ಸೂಕ್ತವಾದ ಉತ್ತರ ಕೊಡುತ್ತಾರೆ, ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅವರಿಗೆ ನೀವು ವಾರ್ನ್ ಮಾಡಿ ಅಧ್ಯಕ್ಷರೇ.

(ಗೊಂದಲ)

ಅಧ್ಯಕ್ಷರು: ಆಯಿತು, ದಯಮಾಡಿ ಕುಳಿತುಕೊಳ್ಳಿ, ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಇವರು ಶಾಸಕರನ್ನು ಕಸಕ್ಕಿಂತ ಕಡೆ ಮಾಡುತ್ತಿದ್ದಾರೆ. ದಯವಿಟ್ಟು ತಾವು ಇವರಿಗೆ ಎಚ್ಚರಿಕೆ ಕೊಡಿ. ಶಾಸಕರಿಗೆ ಸೂಕ್ತವಾದ ಗೌರವ ಕೊಡಬೇಕು ಎಂದು ತಾವು ಅವರಿಗೆ ಹೇಳಿಕೊಡಿ.

(ಗೊಂದಲ)

ಶ್ರೀ ಅರ್ಕೋಡ್ ಹನುಮಂತಪ್ಪ: ಸಚಿವರು ಉತ್ತರ ಹೇಳಲು ಇವರು ಬಿಡುತ್ತಿಲ್ಲ. ನಾವೂ ಕೂಡ ಸರ್ಕಾರದ ಉತ್ತರ ಕೇಳಬೇಕಾಗಿದೆ, ಇದರ ಬಗ್ಗೆ ನಮಗೂ ಕೂಡ ಕಾಳಜಿ ಇದೆ.

(ಗೊಂದಲ)

ಶ್ರೀ ಅರ್ಕೋಡ್ ಹನುಮಂತಪ್ಪ: ಎಲ್ಲರೂ ಹೀಗೆ ಒಮ್ಮೆಲೇ ಮಾತನಾಡಿದರೆ ಸರ್ಕಾರ ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ?

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಜ್ಞಾನೇಂದ್ರರವರೇ, ನಿಮ್ಮಂಥ ಹಿರಿಯ ಸದಸ್ಯರೇ ಹೀಗೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು: ಶಾಸಕರಿಗೆ ಒಂದು ಸ್ವಲ್ಪವಾದರೂ ಗೌರವ ಕೊಡಬೇಡವೇ?

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಆಗಲೇಬೇಕು. ಇಲ್ಲದಿದ್ದರೆ, ಈ ಸದನಕ್ಕೆ ಅಗೌರವವಾಗುತ್ತದೆ, ಶಾಸಕರಿಗೆ ಅಗೌರವವಾಗುತ್ತದೆ. ಆದ್ದರಿಂದ, ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡುತ್ತೇವೆ ಎಂದು ಅವರು ಹೇಳಲೇಬೇಕು.

ಶ್ರೀ ಕೆ. ಶ್ರೀನಿವಾಸಗೌಡ(ಕೃಷಿ ಸಚಿವರು): ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿರುವಾಗ ಎಲ್ಲರೂ ಒಟ್ಟಿಗೆ ನಿಂತು ಮಾತನಾಡಿದರೆ ಹೇಗೆ? ಏನಿದು? ಒಬ್ಬೊಬ್ಬರಾಗಿ ಮಾತನಾಡಿ, ಅವರು ಉತ್ತರ ಕೊಡುತ್ತಾರೆ. ಎಲ್ಲರೂ ಮಾತನಾಡಿದರೆ ಏನು ಅರ್ಥವಾಗುತ್ತದೆ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ನೀವೂ ಶಾಸಕರಾಗಿ ವಿರೋಧ ಪಕ್ಷದಲ್ಲಿದ್ದಿರಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಹಿಂದೆ ಮಾಡಿದ್ದನ್ನು ಹೇಳುತ್ತಿದ್ದಾರೆ. ಈವರೆಗೆ ಮಾಡಿದ್ದಂಥ ವ್ಯವಸ್ಥೆಯನ್ನು ಅವರು ಹೇಳುತ್ತಿದ್ದಾರೆ. ಬಹುಶಃ ಮಂತ್ರಿಗಳು, ಮುಂದೆ ಏನು ಮಾಡುತ್ತಾರೆಂದು ಇನ್ನೂ ಹೇಳಿಲ್ಲ. ಅವರು, ಮಾನ್ಯ ಮಹದೇವಪ್ಪನವರು ಸೇರಿ ಹಿಂದೆ ಆ ರೀತಿ ಮಾಡಿದ್ದೆವು ಎಂದು ಹೇಳುತ್ತಿದ್ದಾರೆ. ಹೌದಲ್ಲವೇ?

ಶ್ರೀ ವಾಟಾಳ್ ನಾಗರಾಜ್: ಅದನ್ನೇ ನಾವೂ ಕೇಳುತ್ತಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವರು ಮಾಡಿದ್ದನ್ನು ಹೇಳಬಾರದೇ? ಈ ರೀತಿ ಒಂದು ಕಮಿಟೆ ಮಾಡಿದ್ದೆವು ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು: ಆಯಿತು, ಮಾನ್ಯ ಮಾಧುಸ್ವಾಮಿಯವರೇ, ವಾಟಾಳ್ ನಾಗರಾಜ್‌ರವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಅಂಜನಾಮೂರ್ತಿ(ವಸತಿ ಸಚಿವರು): ಅವರು ಪೂರ್ಣ ಉತ್ತರ ಕೊಡಲಿ, ನಂತರ ನೀವು ಕೇಳಿ.

ಅಧ್ಯಕ್ಷರು: ದಯಮಾಡಿ, ಅವರು ಉತ್ತರ ಕೊಡಲು ಅವಕಾಶ ಮಾಡಿಕೊಡಿ. ಏಕೆ ಈ ರೀತಿ ಮಾಡುತ್ತಿದ್ದೀರಿ?

ಶ್ರೀ ಬಿ.ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೆ, ನಾವು ದಿನಾಂಕ 12–01–05ರಂದು ಹೊರಡಿಸಿರುವ ಸತ್ತೋಲೆ, ಈ ಹಿಂದೆ ದಿನಾಂಕ 23–01–03ರಲ್ಲಿ ಬರಪರಿಹಾರ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸಲಾಗಿತ್ತು. ಅದರ ರೆಫರೆನ್ಸ್ ಇಟ್ಟುಕೊಂಡು ಆ ಸಮಿತಿಯ ಕೆಳಗೆ ಕಾರ್ಯನಿರ್ವಹಿಸಲು ಇದನ್ನು ಮಾಡಿದ್ದೇವೆ.

ಸಿ.ಇ.ಒ.ಗಳನ್ನು ಅಧ್ಯಕ್ಷರನ್ನಾಗಿ ಮಾಡಿಲ್ಲ. ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಅಧಿಕಾರಿಗಳ ಮಟ್ಟದಲ್ಲಿ ಕೇವಲ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಾರೆ.

ದಿನಾಂಕ 23–01–03ರ ಸುತ್ತೋಲೆ ಸಂಖ್ಯೆ 78ರ ಪ್ರಕಾರ ತಾಲ್ಲೂಕು ಮಟ್ಟದಲ್ಲಿರುವ ಬರ ಪರಿಹಾರ ಸಮಿತಿಗಳಿಗೆ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಅದರ ಕೆಳಗೆ ಈ ಒಂದು ವ್ಯವಸ್ಥೆಯನ್ನು ನಾವು ತಾತ್ಕಾಲಿಕವಾಗಿ ಮಾಡುತ್ತಿದ್ದೇವೆ. ನಾನು ಸಹ ಬರಗಾಲದ ಪ್ರದೇಶದಿಂದ ಬಂದಿರುವವನು,

ಕುಡಿಯುವ ನೀರಿನ ತೊಂದರೆಯನ್ನು ನಾನು ವೈಯಕ್ತಿಕವಾಗಿ ಅನುಭವಿಸುತ್ತಿರುವವನು. ಹಾಗಾಗಿ,ಅಲ್ಲಿರುವ ಗೊಂದಲಗಳನ್ನು ನೋಡಿ ನಾನು ತಕ್ಷಣವೇ ಇದನ್ನು ಬಗೆಹರಿಸಬೇಕು ಎಂದು ನನ್ನ ತೊಂದರೆಯನ್ನೇ ನಿವಾರಿಸಿಕೊಳ್ಳಲು ನಾನು ಆತುರಪಟ್ಟು ದಿನಾಂಕ 12–01–05ಕ್ಕೆ ಈ ಒಂದು ಟಾಸ್ಕ್ ಫೋರ್ಸನ್ನು ಮಾಡಿದ್ದೇವೆ.

ಶ್ರೀ ಕ್ಯಾತ್ಸಂದ್ರ.ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. 2003ರಲ್ಲಿ ಬರ ಪರಿಹಾರ ಸಮಿತಿಗಳನ್ನು ಶಾಸಕರ ಉಸ್ತುವಾರಿಯಲ್ಲಿ ಮಾಡಿರತಕ್ಕಂಥಾದ್ದು ಸರಿ ಇದೆ. ಈ ಮಧ್ಯ ಚುನಾವಣೆ ಬಂದಾಗ, ಆ ಸಮಿತಿಯಿಂದ ಶಾಸಕರುಗಳನ್ನು ತೆಗೆದು ಅಸಿಸ್ಟೆಂಟ್ ಕಮೀಷನರನರುಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಈಗ ಆ ಸಮಿತಿಗಳ್ಯಾವುದೂ ಇಲ್ಲ. ಈಗ ನೀವು ಇ.ಒ.ಗಳನ್ನು ಮೇಲ್ವಿಚಾರಕರನ್ನಾಗಿ ಮಾಡಿ ಟಾಸ್ಕ್ ಫೋರ್ಸನ್ನು ಮಾಡುತ್ತಿದ್ದೀರಲ್ಲಾ, ಇದು ಏಕೆ ಬೇಕು? ಬರ ಪರಿಹಾರ ಸಮಿತಿಗಳಿಗೆ ಮತ್ತೆ ಚಾಲನೆ ನೀಡಿ, ಈಗಿರತಕ್ಕಂಥ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ, ಎಲ್ಲಾ ಕೆಲಸಗಳನ್ನೂ ಅವರ ಉಸ್ತುವಾರಿಯಲ್ಲಿ ನೋಡತಕ್ಕಂಥಾದ್ದನ್ನು ನೀವು ಮಾಡಬೇಕು, ಅದು ಸರಿಯಾದುದು, ಆದರೆ, ಸುಮ್ಮಸುಮ್ಮನೆ ಅಧಿಕಾರಿಗಳು ಬರೆದು ಕೊಡುತ್ತಾರೆ ಎಂದು ನೀವು ಏಕೆ ತಪ್ಪು ಮಾಹಿತಿಯನ್ನು ಇಲ್ಲಿ ಹೇಳುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಈ ವರ್ಷ ಎಲ್ಲಾ ತಾಲ್ಲೂಕುಗಳಲ್ಲೂ ಬರ ಇಲ್ಲ. ಆ ಸಮಿತಿಗಳ ಗತಿ ಏನು? ಆದ್ದರಿಂದ, ದಯವಿಟ್ಟು ಇದನ್ನು ಕ್ಲಿಯರ್ ಮಾಡಿ. ಜನರಿಗೆ ಒಂದು ತಪ್ಪು ಸಂದೇಶ ಹೋಗುತ್ತದೆ. ಶಾಸಕರಾದ ನಾವು ಅರ್ಜಿ ಹಿಡಿದುಕೊಂಡು, ಸಿ.ಇ.ಒ.ಗಳ ಹತ್ತಿರ ಹೋಗಿ ನಿಂತುಕೊಂಡು ನಮಗೆ ಒಂದು ಬೋರ್‌ವೆಲ್ ಕೊಡಿ ಎಂದು ಕೇಳೋಣವೇ? ಮಂತ್ರಿಗಳೇ, ತಾವು ಸಹ ಆಯ್ಕೆಯಾಗಿ ಬಂದಿದ್ದೀರಿ. ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ಮಾಡಿ, ಅವರಿಗೆ ಅಧಿಕಾರ ಕೊಟ್ಟು, ಹಣ ಕೊಡಿ. ಎಲ್ಲೆಲ್ಲಿ ಅರ್ಜೆಂಟ್ ಪ್ರಾಬ್ಲಂ ಇದೆ, ಅಲ್ಲಿ ಮಾಡುತ್ತಾರೆ.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಗಳಲ್ಲಿ ಬರ ಪರಹಾರ ಕಾಮಗಾರಿ ಸಮಿತಿಗಳನ್ನೇ ಮಾಡಿಲ್ಲ. ಅಂತಹ ತಾಲ್ಲೂಕುಗಳಲ್ಲಿ ಈಗ ಹೊಸ ಸಮಿತಿಯನ್ನು ಮಾಡಬೇಕಾಗುತ್ತದೆ. ಇದನ್ನು ದಯವಿಟ್ಟು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಬಿ.ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೆ, ಈಗ ತೀವ್ರವಾಗಿ ತೊಂದರೆಗಳನ್ನು ಅನುಭವಿಸುತ್ತಿರತಕ್ಕಂಥ ಗ್ರಾಮಗಳನ್ನು ನಾವು ಏನು ಊಹೆ ಮಾಡಿದ್ದೆವು, ರಾಜ್ಯದಲ್ಲಿ ಸುಮಾರು 56,682 ಜನ ವಸತಿಗಳಿವೆ. ಅವುಗಳ ಪೈಕಿ ಈ ಸಾಲಿನಲ್ಲಿ 45200 ಜನವಸತಿಗಳಿಗೆ 40 LPCD ನೀರನ್ನು ನಾವು ಪೂರೈಕೆ ಮಾಡುತ್ತಿದ್ದೇವೆ. ಇನ್ನುಳಿದ 11474 ಜನವಸತಿಗಳಲ್ಲಿ 40 LPCDಗಳಿಗಿಂತ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದ್ದು ಕನಿಷ್ಟ ಈ 40 LPCD ನೀರು ಪೂರೈಕೆಯನ್ನು ಮಾಡಬೇಕದಂಥ ಜವಾಬ್ದಾರಿ ನಮ್ಮ ಮೇಲಿದೆ. ಸರ್ಕಾರ ಕುಡಿಯುವ ನೀರು ಪೂರೈಕೆಗೆ ಹೆಚ್ಚಿನ ಮಹತ್ವವನ್ನು ಮತ್ತು ಪ್ರಥಮ ಆದ್ಯತೆಯನ್ನು ಕೊಡುವ ಉದ್ದೇಶದಿಂದ ರಾಜ್ಯ ಮತ್ತು ಕೇಂದ್ರ ವಲಯ ಕಾರ್ಯಕ್ರಮಗಳಡಿ ಎಲ್ಲಾ ಜನವಸತಿಗಳಿಗೆ ಸಮರ್ಪಕ ಕುಡಿಯುವ ನೀರು ಪೂರೈಸಲು ಪ್ರಯತ್ನ ಮಾಡುತ್ತಿದ್ದೇವೆ. ಈ ಆರ್ಥಿಕ ವರ್ಷದಲ್ಲಿ ಅಂದರೆ ಡಿಸೆಂಬರ್ 2004–05ರಲ್ಲಿ,

ಕೈಪಂಪುಗಳನ್ನು ಹಾಕುವ ಗುರಿ 4124 ಇತ್ತು. ಅದರಲ್ಲಿ ಬಾವಿ ಕೊರೆದು 2756 ಕೈಪಂಪುಗಳನ್ನು ಅಳವಡಿಸಿದ್ದೇವೆ. ಈ ವರ್ಷದಲ್ಲಿ 1300 mini water supply scneme ಮಾಡಬೇಕೆಂದಿತ್ತು. ಅದರಲ್ಲಿ 633 ಮಾಡಿ ಮುಗಿಸಿದ್ದೇವೆ, ನಳ ನೀರು ಸರಬರಾಜು ಮೂಲಕ ನೀರು ಸರಬರಾಜು ಮಾಡುವುದಕ್ಕೆ 650 ಗುರಿ ಇತ್ತು. ಅದರಲ್ಲಿ ಸಾಧನೆ 517 ಮಾಡಿದ್ದೇವೆ. ಬಾಕಿ ಇರುವುದನ್ನು ಶೀಘ್ರವಾಗಿ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಇನ್ನು ಹಣದ ವಿಷಯವಾಗಿ ಹೇಳುವುದಾದರೆ, ಜಿಲ್ಲಾ ಪಂಚಾಯತ್‌ನಲ್ಲಿ ಈ ವರ್ಷಕ್ಕೆ ನಿಗದಿ ಮಾಡಿದ ಹಣದಲ್ಲಿ ಖರ್ಚಾಗದೆ ಇನ್ನೂ 51.38 ಕೋಟಿ ರೂಪಾಯಿಗಳು ಎಲ್ಲಾ ಜಿಲ್ಲಾಪಂಚಾಯತ್‌ನದು ಸೇರಿ ಉಳಿದಿದೆ. ಅದೂ ಅಲ್ಲದೆ ಸನ್ಮಾನ್ಯ ಸದಸ್ಯರುಗಳು ಕುಡಿಯುವ ನೀರಿನ ತೊಂದರೆ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ ನಂತರ 25 ಮತ್ತು 26ನೇ ತಾರೀಕು ಸುಮಾರು 30 ಕೋಟಿ ರೂಪಾಯಿಗಳನ್ನು ಜಿಲ್ಲಾಪಂಚಾಯತ್‌ಗಳಿಗೆ ನಾವು ಬಿಡುಗಡೆ ಮಾಡಿದ್ದೇವೆ. ಸರಿಸುಮಾರು ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳಷ್ಟು ಆಯಾಯ ಜಿಲ್ಲೆಯ ಜನಸಂಖ್ಯಾ ಆಧಾರದ ಮೇಲೆ ಜಿಲ್ಲಾ ಪಂಚಾಯತ್‌ಗಳ ವರದಿಗಳ ಆಧಾರದ ಮೇಲೆ ಒಂದೊಂದು ಜಿಲ್ಲಾಪಂಚಾಯತ್‌ಗೆ ಹಣಬಿಡುಗಡೆಯಾಗಿದೆ. ಈ ತತ್ಕಾಲದ ಶ್ರಮಗಳನ್ನು ಮಾಡುವುದಕ್ಕೆ ಬಹಳ ತೀವ್ರವಾಗಿ task force ಮಾಡಿ ನಾವು ಅಧಿಕಾರಿಗಳನ್ನು ಆ ಸಭೆಗೆ ಕರೆದು ಬಹಳ ಜವಾಬ್ದಾರಿಯನ್ನು ಹೊರಿಸಿ ತತ್‌ಕ್ಷಣ ಸಹಾಯವಾಣಿ ಎಂದು ಮಾಡಿ ಟೆಲಿಫೋನ್ ಕರೆ ಬಂದ ತಕ್ಷಣ ಆ ಊರಿಗೆ ಹೀಗಿ ಅಲ್ಲಿ ಅವಶ್ಯಕತೆ ಏನಿದೆ ಎನ್ನುವುದನ್ನು ಪರಿಶೀಲನೆ ಮಾಡಿ ಶೀಘ್ರವಾಗಿ ಅಲ್ಲಿ ರಿಪೇರಿ ಮಾಡತಕ್ಕಂಥದ್ದಾಗಲಿ, ಪೈಪ್‌ಲೈನ್ ಸರಿ ಮಾಡತಕ್ಕಂಥದ್ದಾಗಲಿ, ಮೋಟಾರ್ ಅನ್ನು ಸರಿ ಮಾಡತಕ್ಕಂಥದ್ದಾಗಲಿ ಯಾವುದೇ ಕಾರಣಕ್ಕೂ ನೀರಿನ ತೊಂದರೆ ಆಗಬಾರದು, ಕುಡಿಯುವ ನೀರು ಕೊಡುವುದು ಸರ್ಕಾರದ ಪ್ರಥಮ ಆದ್ಯತೆ ಎಂದು ತಿಳಿದುಕೊಂಡು ನೀರು ಕೊಡತಕ್ಕಂಥ ಜವಾಬ್ದಾರಿ ನಾಗರೀಕ ಸರ್ಕಾರದೆಂದು ಮುನ್ನೆಚ್ಚರಿಕೆವಹಿಸಿ ನಾವು ಎಲ್ಲಾ ಕಾರ್ಯಕ್ರಮಗಳನ್ನು ನನ್ನ ಸ್ವಂತ ಅನುಭವದ ಆಧಾರದ ಮೇಲೆಯೂ ಸಹ ನಡೆಸಲಿಕ್ಕೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇನೆ. ಇದರ ಜೊತೆಗೆ ರಾಜ್ಯದ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅದೇನೆಂದರೆ, ಹಳ್ಳಿಮಟ್ಟಕ್ಕೂ ಸಹ ರಾಜ್ಯದ ಅಧಿಕಾರಿಗಳು ಹೋಗಬೇಕು, ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲ್ಲೂಕು ಮತ್ತು ಗ್ರಾಮಗಳ ಮಟ್ಟಕ್ಕೆ ಹೋಗಬೇಕು. ತಾಲ್ಲೂಕು ಮಟ್ಟದ ಅದಿಕಾರಿಗಳು ಪ್ರತಿದಿವಸ ಕನಿಷ್ಟ ಪಕ್ಷ ಪ್ರತಿಯೊಂದು ಊರುಗಳಲ್ಲಿಯೂ ಅಟೆಂಡ್ ಮಾಡುವಂಥ ಕೆಲಸವಾಗಬೇಕು.

(ಗೊಂದಲ)

ಅಧ್ಯಕ್ಷರು: ಎಲ್ಲರು ಕುಳಿತುಕೊಳ್ಳಿ. ಉತ್ತರ ಕೊಡುತ್ತಾರೆ.

ಶ್ರೀ ಬಿ.ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 80 ತಾಲ್ಲೂಕುಗಳನ್ನು ಬರಪರಿಹಾರದಡಿ ಈಗಾಗಲೇ ಸರ್ಕಾರ ಘೋಷಣೆ ಮಾಡಿದೆ. ಅದರಲ್ಲಿ ಸುಮಾರು ರೂ.20 ಕೋಟಿ ಹಣವನ್ನು ಕುಡಿಯುವ ನೀರಿಗಾಗಿಯೇ ನಾವು ಮೀಸಲಿಟ್ಟಿದ್ದೇವೆ. ಜಿಲ್ಲಾಧಿಕಾರಿ ಮತ್ತು ನಮ್ಮ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಇಬ್ಬರೂ ಸಮನ್ವಯತೆಯನ್ನು ಕಾಪಾಡಿಕೊಂಡು ಅವರು ಪೈಪುಲೈನ್ ಅಳವಡಿಸುವುದು, ಮೋಟಾರ್ ಕೊಡಿಸುವುದು, ಹೊಸ ಬಾವಿ ಕೊರೆಸುವುದಕ್ಕೂ ನಾವು ಅವಕಾಶ ಮಾಡಿಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಬಿ.ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ. ನೀವು ಏನು ಕೇಳಬೇಕಾದರೂ ಅವರು ಉತ್ತರ ಕೊಟ್ಟ ನಂತರ ಕೇಳಿ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ. ಏನ್ರೀ, ಇಲ್ಲಿ ಒಂದು ಸಾಮಾನ್ಯ ಜ್ಞಾನ ಸಹ ಇಲ್ಲವೇ? ಎಲ್ಲರೂ ನಿಂತುಕೊಂಡು ನಿಮ್ಮಿಷ್ಟಕ್ಕೆ ತಕ್ಕಂತೆ ಮಾತನಾಡಿದರೆ ಸಭೆ ಏತಕ್ಕೆ ಬೇಕು? ಎಲ್ಲರಿಗೆ ಟ್ರೈನಿಂಗ್ ನೀಡಿ ಇಂಥಿಂಥ ನಿಯಮಗಳು ಇವೆ ಎಂದು ಹೇಳಿದ್ದೆವು. ಇಷ್ಟಾದರೂ ಸಹ ನಿಮಗೆ ಇಷ್ಟ ಬಂದ ರೀತಿಯಲ್ಲಿ ವರ್ತನೆ ಮಾಡುತ್ತಿದ್ದೀರಿ. ಈ ತರಹ ಆದರೆ ಸಭೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮೊದಲ ನಮ್ಮ ಸದಸ್ಯರಿಗೆ ವಿನಂತಿ ಮಾಡುತ್ತೇನೆ. ಸಚಿವರು ಉತ್ತರ ಕೊಡುತ್ತಿದ್ದಾರೆ. ನಾವು ನೊಂದು ಒಂದು ಮಾತನ್ನು ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣೆಯ ಕರೆದಂಥ ಈ ವಿಶೇಷ ಅಧಿವೇಶನದಲ್ಲಿ ಪ್ರಾರಂಭದಲ್ಲಿ ಕುಡಿಯುವ ನೀರು, ವಿದ್ಯುತ್‌ನ ಕಣ್ಣುಮುಚ್ಚಾಲೆ, ವಿದ್ಯುತ್ ಕ್ಷಾಮದ ಬಗ್ಗೆ ನಾವು ಆದ್ಯತೆ ಕೊಟ್ಟಿದ್ದೆವು. ಇಷ್ಟು ಗಂಭೀರವಾಗಿ ಈ ಕಡೆ ಮತ್ತು ಆ ಕಡೆ ಕುಳಿತಿರುವ ಸದಸ್ಯರು ಅಭಿಪ್ರಾಯ ವ್ಯಕ್ತ ಮಾಡುತ್ತಿರುವ ಸಂದರ್ಭದಲ್ಲಿ, ದಯಮಾಡಿ ಸಚಿವರು ತಪ್ಪು ತಿಳಿದುಕೊಳ್ಳಬಾರದು. ಕೊನೆಯ ಪಕ್ಷ ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರು ಮತ್ತು ತಾವೆಲ್ಲಾ ಒಂದು ಸಭೆ ಮಾಡಿ ಈ ಸದನಕ್ಕೆ ಉತ್ತರ ಕೊಡುವಂಥ ಸಮಯದಲ್ಲಿ ನಾಲ್ಕು ಮಾತಿನಲ್ಲಿ ಸ್ಪಷ್ಟವಾದಂಥ ಆ ಸಮಸ್ಯೆ ಬಗೆಹರಿಸುವ ಉತ್ತರವನ್ನು ಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ನಮ್ಮ ಮಾತು ಕೇಳಬೇಡಿ ಸ್ವಾಮಿ. ನಿಮ್ಮ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ದೇವೇಗೌಡರ ಇತ್ತೀಚಿನ ಹೇಳಿಕೆ ಏನೆಂದರೆ–'ಗ್ರಾಮೀಣ ಪ್ರದೇಶದ ಜನತೆ ಮೂಲಭೂತ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ. ರೈತರ ಸ್ಥಿತಿ ಚಿಂತಾಜನಕವಾಗಿದೆ. ಕುಡಿಯುವ ನೀರಿನ ಸಮಸ್ಯೆ ತಾರಕಕ್ಕೇರಿದೆ. ರಾಜ್ಯದಲ್ಲಿ ಅಲ್ಲಲ್ಲಿ ಕುಡಿಯುವ ನೀರಿಗಾಗಿ ಹೊಡೆದಾಟ ನಡೆಸುವ ದಿನಗಳು ಬರಬಹುದು.' ಇದು ಜುಲೈ 29ರ ವಿಜಯ ಕರ್ನಾಟಕದಲ್ಲಿ ಮತ್ತು ಬೇರೆ ಬೇರೆ ಪತ್ರಿಕೆಗಳಲ್ಲಿ ಶ್ರೀ ದೇವೇಗೌಡರು ಹೇಳಿರುವಂಥದ್ದು. ಇಲ್ಲಿ ಮಾನ್ಯ ದೇವೇಗೌಡರ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಸಮ್ಮಿಶ್ರ ಸರ್ಕಾರ ಇದ್ದು ಅದರಲ್ಲಿಯ ಪ್ರಮುಖರೇ – 'ನಾಳೆ ಬೀದಿಗಿಳಿದು ಹೋರಾಟ ಮಾಡುವಂಥ ಪರಿಸ್ಥಿತಿ ಬರುತ್ತದೆ, ಎಲ್ಲಾ ಕೈಮೀರಿ ಹೋಗುತ್ತದೆ' ಎನ್ನುವ ಹೇಳಿಕೆಯನ್ನು ಕೊಟ್ಟಾಗ ನಮ್ಮ ಮಾತಿಗೆ ಬೆಲೆ ಕೊಡದಿದ್ದರೂ ಅವರ ಮಾತಿಗಾದರೂ ಬೆಲೆ ಕೊಡಿ. ನಿಮ್ಮ ಹತ್ತಿರ ನಾವು ಭಿಕ್ಷೆ ಕೇಳುತ್ತಿದ್ದೇವೆಯೇ? ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಿ, ನಮ್ಮ ವಿಧಾನಾಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಗ್ಗೆ ಗಮನ ಕೊಡುತ್ತೇವೆ, ಕಳೆದ 8 ತಿಂಗಳಿನಿಂದ mini water supply scheme ಇರಬಹುದು, piped water supply scheme ಇರಬಹುದು, bore well ಇರಬಹುದು, ಇದ್ಯಾವುದನ್ನು ಮಾಡಿಲ್ಲ. ಅಂತರ್‌ಜಲ ನೀರು ಕುಸಿದು ಹೋಗಿರಬೇಕಾದರೆ, ಇನ್ನೂ 50–60 ಅಡಿ ತೆಗೆದು ಅಲ್ಲಿಂದ ನೀರನ್ನು ಪಂಪ್ ಮಾಡಿ ನೀರು ಬರುವಂಥ ವ್ಯವಸ್ಥೆ ಮಾಡಿಲ್ಲ. ಪೈಪು ಇಳಿಸಲಿ. ಜನ ಸಾಯುತ್ತಿದ್ದಾರೆಂದು

ಹೇಳಿದರೆ, 'ನಾನು task force ಮಾಡಿದ್ದೇನೆ, ಯಾವುದೋ ಅಧಿಕಾರಿಗಳ ಮುಖಾಂತರ ಸಮಿತಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹಾಗಾದರೆ ಮಾಡಿಕೊಳ್ಳಿ , ನಾವು ಸದನದಿಂದ ಹೊರಗೆ ಹೋಗುತ್ತೇವೆ. ಅಧಿಕಾರಿ ಮಾಡಿದರೆ ಹೀಗೇಕಾಗುತ್ತಿತ್ತು?

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ಅವರು ಇನ್ನೂ ಅದಕ್ಕೆ ಉತ್ತರ ಕೊಟ್ಟೇ ಇಲ್ಲ. ಅವರು ಅದನ್ನು ರಿಜೆಕ್ಟ್ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ಇದು ಗಂಭೀರವಾದ ವಿಚಾರ. ಅವರು ಏನು ಹೇಳುತ್ತಾರೆನ್ನುವುದನ್ನು ಕೇಳೋಣ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ...ಶಾಸಕರು ಇದ್ದರೂ ಅಧಿಕಾರಿಗಳ ಸಮಿತಿ ಮಾಡಿ ಅಧಿಕಾರಿಗಳ ಹತ್ತಿರ ಮಾಡಿಸುತ್ತೇನೆಂದು ಹೇಳಿ ಶಾಸಕರಿಗೆ ಅವಮಾನ ಮಾಡುವಂಥ ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ. ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟು ಶಾಸಕರ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿನ ಕೆಲಸವನ್ನು ಮಾಡಿಸಬೇಕಾಗಿತ್ತು.

(ಗೊಂದಲ)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಅಲ್ಲೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಅವರು ಹೊರಗಡೆಗೆ ಹೋಗಬೇಕಾಗಿದೆ. ಅವರಿಗೆ ಜನರ ಬಗ್ಗೆ ಕಳಕಳಿ ಇದ್ದಿದ್ದರೆ ಸದನದಲ್ಲಿದ್ದುಕೊಂಡು ಮಾತನಾಡಬಹುದಾಗಿತ್ತು. ಅವರಿಗೆ ಜನರ ಬಗ್ಗೆ ಕಳಕಳಿ ಇಲ್ಲ. ಅವರಿಗೆ ಯೋಜನೆಗಳ ಬಗ್ಗೆ ಕಳಕಳಿ ಇಲ್ಲ. ಪತ್ರಿಕೆಯಲ್ಲಿ ಬರುವುದಕ್ಕಾಗಿ ಅವರು ಹೋಗುತ್ತಿದ್ದಾರೆ. ರಾಜಕಾರಣಕ್ಕಾಗಿ ಪ್ರತಿಭಟನೆ ಮಾಡಿ ಹೋಗುತ್ತಿದ್ದೀರಿ. ಸಮರ್ಪಕವಾದ ರೀತಿಯಲ್ಲಿ ಜನರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಮನಸ್ಸಿಲ್ಲ. ನೀವು ಉದ್ದೇಶಪೂರ್ವಕವಾಗಿ ಹೋಗುತ್ತಿದ್ದೀರಷ್ಟೆ. ಟಿ.ವಿ.ಯಲ್ಲಿ ಕಾಣಬೇಕಾಗಿದೆ. ಆ ದೃಷ್ಟಿಯಿಂದ ನೀವು ಹೊರಗಡೆ ಹೋಗುತ್ತಿದ್ದೀರಷ್ಟೆ.

ಶ್ರೀ ಎಸ್.ಎಸ್.ಪಾಟೀಲ್: ನೀವು ಹೀಗೆ ಹೊರಗಡೆ ಹೋದರೆ ಪೇಪರ್‌ನಲ್ಲಿ ಬರಬಹುದು, ಟಿ.ವಿ.ಯಲ್ಲಿ ಬರಬಹುದಷ್ಟೆ. ಚರ್ಚೆಯಲ್ಲಿ ಪಾಲ್ಗೊಳ್ಳದೆ ಈ ರೀತಿ ಹೊರಗಡೆ ಹೋಗುವುದರಿಂದ ನೀವು ರಾಜ್ಯದ ಜನತೆಗೆ ಏನು ಉಪಯೋಗ ಮಾಡಿದ ಹಾಗೆ ಆಯಿತು? ವಿರೋಧ ಪಕ್ಷದವರಾಗಿದ್ದು ಸರ್ಕಾರದಿಂದ ಉತ್ತರ ಕೊಡುವ ತನಕ ಕಾಯಲಿಲ್ಲ.

(ಅಡಚಣೆ)

ಅಧ್ಯಕ್ಷರು: ಆಯಿತು. ಈಗ ಸಚಿವರು ಉತ್ತರ ಮುಂದುವರಿಸಲಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರಲ್ಲಿ ಒಂದು ಮನವಿ ಏನೆಂದರೆ, ನಾವು ಸಲಹಾ ಸಮಿತಿ ಸಭೆಯಲ್ಲೂ ಮಾತನಾಡಿದ್ದು ಆಯಿತು. ತಮ್ಮಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ

ಮನವಿ ಮಾಡಿದ್ದಾಯಿತು. ಅಲ್ಲಿ task force ಅಥವಾ ಯಾವುದೇ ಸಮಿತಿ ಮಾಡಿದಾಗ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ಇದಕ್ಕೆ ಕಾಡಿ ಬೇಡಿ ಭಿಕ್ಷೆ ಏನೂ ಕೇಳಬೇಕಾಗಿಲ್ಲ.

ಅಧ್ಯಕ್ಷರು: ಮಾನ್ಯ ವಾಟಾಳ್‌ರವರೆ, ಈಗ ಬಹಳ ಜನ ಎದ್ದು ನಿಂತುಕೊಂಡು ಶಾಸಕರ ಅಧ್ಯಕ್ಷತೆಯಲ್ಲಿ ಆಗಬೇಕೆಂದು ನೀವೆಲ್ಲಾ ಮನವಿ ಮಾಡಿಕೊಳ್ಳುವುದರ ಮೂಲಕ ಕೇಳಿದಿರಿ. ಅದು ಆಗುವುದಿಲ್ಲವೆಂದು ಮಂತ್ರಿಗಳು ಹೇಳಿರಲಿಲ್ಲ. ಅವರು ವಿವರಗಳನ್ನು ಕೊಡುತ್ತಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೀವು ಹೇಳಬೇಕು ಅವರು ಕೇಳಬೇಕು. ನೀವು ಹೇಳಿರುವುದರಲ್ಲಿ ಸಕಾರಣವಾಗಿರುವುದನ್ನು ಅವರು ತಿರಸ್ಕಾರ ಮಾಡಿದರೆ ಆಗ ಮುಂದಿನ ಕ್ರಮ ಏನಿದೆಯೋ ಅದು ಮಾಡಬಹುದು. ಅದು ಬಿಟ್ಟುಬಿಟ್ಟು ಸುಮ್ಮನೆ ಹೀಗೇ ಆಗಬೇಕು, ಹಾಗೇ ಆಗಬೇಕು ಎಂದು ಹೇಳುವುದು ಸರಿಯಲ್ಲ. ಅದು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೊಂದಿಕೊಳ್ಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ತಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ.

ಅಧ್ಯಕ್ಷರು: ಅವರು Action ನಲ್ಲಿ ತೋರುತ್ತಿಲ್ಲವಲ್ಲಾ ಎಂದು ನಾನು ಹೇಳಿರುವುದು. You have not shown in action. ಏಕೆಂದರೆ ಉತ್ತರ ಕೊಟ್ಟಾಗ ನೀವು ಏನು ಒಂದು ಮನವಿ ಮಾಡಿದಿರಿ ಅದನ್ನು ಅವರು ರಿಜೆಕ್ಟ್ ಮಾಡಿದ್ದಾರೆಯೇ? ರಿಜೆಕ್ಟ್ ಮಾಡಿದ್ದಾರೆಯೇ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ದಯಮಾಡಿ ಅವರಿಂದ ನಮಗೆ ಸುಧೀರ್ಘವಾದಂತ ಉತ್ತರ ಬೇಕಾಗಿಲ್ಲ. ನಮ್ಮಲ್ಲಿ ಎರಡೇ ಪ್ರಶ್ನೆ ಇರತಕ್ಕಂಥದ್ದು.
ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡುವುದು. ಎರಡನೆಯದಾಗಿ ನಾವು ಪ್ರತಿ ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳುವುದು. ಇನ್ನೇನೂ ಉಳಿದಿಲ್ಲ. ಅದಕ್ಕೆ ರಾಮಾಯಣ, ಮಹಾಭಾರತ ಹೇಳಿಕೊಂಡು ಅದೆಲ್ಲಾ ಕಥೆ ಈಗ ಬೇಕಾಗಿಲ್ಲ. ಈಗ ತಕ್ಷಣ ಬೇಕಾಗಿರುವುದು ಮಾನ್ಯ ಮುಖ್ಯಮಂತ್ರಿಗಳು ದಯಮಾಡಿಸಿದ್ದಾರೆ. ನಾನು ಅವರನ್ನು ಕಳಕಳಿಯಿಂದ ಕೇಳುತ್ತಿದ್ದೇನೆ, ದಯವಿಟ್ಟು , ಕುಡಿಯುವ ನೀರಿಗೆ ಪ್ರತಿ ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆಂದು ಅವರು ಹೇಳಲಿ ಅಷ್ಟೆ. ಬೇರೆ ಪ್ರಶ್ನೆ ಇಲ್ಲ. ನಾವು ಇದನ್ನು ರಾಜಕೀಯ ಮಾಡಬೇಕು ಅಥವಾ ಪ್ರಜಾತಂತ್ರ ವ್ಯವಸ್ಥೆಗೆ ಅಗೌರವ ಮಾಡಬೇಕೆಂದಲ್ಲ. ಮತ್ತು ಅವರ ಉತ್ತರವನ್ನು ನಿಲ್ಲಿಸಬೇಕೆಂಬ ಉದ್ದೇಶವಿಲ್ಲ. ತಮಗೆ ನಾನು ಹೇಳುತ್ತಿದ್ದೇನೆ, ನನ್ನ ಕ್ಷೇತ್ರವಾದ ಚಾಮರಾಜನಗರ ಒಂದರಲ್ಲೇ ನಾಲ್ಕು ದಿವಸಗಳಿಂದ ನೀರಿಲ್ಲವೆಂದು ಹೇಳಿದರೆ ನಾವು ಕ್ಷೇತ್ರಕ್ಕೆ ಹೋಗಬೇಕೇ ಅಥವಾ ಈಗ ನೀವು ಚುನಾವಣೆಯನ್ನು ಘೋಷಣೆ ಮಾಡಿದ್ದೀರಿ. ನಾವು ಚುನಾವಣೆಗೆ ಯಾವ ಮುಖ ಇಟ್ಟುಕೊಂಡು ಹಳ್ಳಿಗಳಿಗೆ ಹೋಗೋಣ ಹೇಳಿ? ಆದುದರಿಂದ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವರು ಸಭಾತ್ಯಾಗ ಮಾಡಿದ್ದಾರೆ. ನಾನು ಧರಣ ಮಾಡುತ್ತಿದ್ದೇನೆ.
(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ತೆರಳಿದರು)

ಶ್ರೀ ಸಿ.ಸತ್ಯನಾರಾಯಣ(ಗ್ರಾಮೀಣ ನೀರು ಸರಬರಾಜು ಸಚಿವರು):– ತಮಗೆ, ಸದನಕ್ಕೆ ಗೊತ್ತಿರುವ ಹಾಗೆ, ಸಂವಿಧಾನದ 73ನೇ ತಿದ್ದುಪಡಿಯನ್ವಯ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1999ರ ಪ್ರಕಾರ ಕುಡಿಯುವ ನೀರು ನೀರಿನ ಯೋಜನೆ, ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆಯನ್ನು ಗ್ರಾಮ ಪಂಚಾಯತ್‌ಗಳಿಗೆ ವಹಿಸಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):– ನಾನು ತಮ್ಮಲ್ಲಿ ಮತ್ತೊಮ್ಮೆ ವಿನಂತಿಸುತ್ತೇನೆ, ಬಹಳ ಜನ ಸದಸ್ಯರು ಅವರು ಮೊದಲನೆ ಬಾರಿಗೆ ಬಂದಿರುವವರು. ಏನೋ ಉದ್ವೇಗಕ್ಕೊಳಗಾಗಿ ಅವರು ಹೊರಟು ಹೋಗಬೇಕೆಂದು ಅವರ ಲೀಡರ್ ಅನ್ನು ಕೇಳಲಿಲ್ಲ. ಸಮಸ್ಯೆ ಬಹಳ ತೀವ್ರವಾದುದು. ತಾವು ದೊಡ್ಡ ಮನಸ್ಸು ಮಾಡಿ ಅವರನ್ನು ಕರೆಸಿ ಬುದ್ಧಿವಾದ ಹೇಳಿ. ಸಮಸ್ಯೆಗೆ ಪರಿಹಾರ ಹುಡುಕೋಣ. ನಾಳೆ, ನಾಡಿದ್ದರಲ್ಲಿ ಅಸೆಂಬ್ಲಿ ಅಡ್ಜರ್ನ್ ಆದರೆ, ಅವರಿಗೇನೂ ಪರಿಹಾರ ಸಿಗುವುದಿಲ್ಲ. ಎಲ್ಲೋ ಒಂದು ಕಡೆ ಉದ್ವಿಗ್ನತೆಗೆ ಒಳಗಾಗಿದ್ದಾರೆ. ತಾವು ದೊಡ್ಡ ಮನಸ್ಸು ಮಾಡಿ, ಅವರನ್ನು ಹೊರಗೆ ಕಳುಹಿಸಿ, ನಾವು ಕಲಾಪ ನಡೆಸುವುದು ಅಷ್ಟೇನೂ ಚೆನ್ನಾಗಿ ಕಾಣುವುದಿಲ್ಲ. ಅವರು ಹೇಳುತ್ತಿದ್ದಾರೆ. ಪಾಪ, ಎಲ್ಲೋ ಒಂದು ಕಡೆ ಆವೇಶಕ್ಕೊಳಗಾಗಿದ್ದಾರೆ. ತಾವು ದೊಡ್ಡ ಮನಸ್ಸು ಮಾಡಿ, ಅವರಿಗೆ ಹೇಳಿ ಕರೆಸಬೇಕು. ಎಲ್ಲಾ ಫರ್ಸ್ಟ್ ಟೈಂ ಬಂದಿರುವವರು.

ಶ್ರೀ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ):– ನಾನು ಒಪ್ಪುತ್ತೇನೆ. ಉತ್ತರ ಹೇಳುವವರೆಗೂ ನಾವೂ ಕಾಯಬೇಕಾಗಿತ್ತು. ಅದರಲ್ಲಿ ಏನೂ ಎರಡು ಮಾತಿಲ್ಲ. ಆಮೇಲೆ, ಏಕೆ ಮಾಡಿಲ್ಲವೆಂದು ಕೇಳುವುದಕ್ಕೆ ನಮಗೆ ಚಾನ್ಸ್ ಇತ್ತು. ಆಕಸ್ಮಾತ್ ಆಗಿ ಇಂಥ ಘಟನೆಗಳು ನಡೆಯುತ್ತವೆ. ಅದನ್ನೇ ತಾವು ದೊಡ್ಡದು ಮಾಡುವುದಲ್ಲ.

ನಾನೂ ಕೂಡ ಅವರನ್ನು ಅವರ ರಿಪ್ಲೈ ಕಂಪ್ಲೀಟ್ ಆಗಲಿ ಸ್ವಲ್ಪ ತಡೆಯಿರಿ ಎಂದು ಕೇಳಿಕೊಂಡೆ. ಸ್ವಲ್ಪ ಸಮಸ್ಯೆಗಳು ಇರುತ್ತದೆ. ಕಾನ್ಸ್‌ಸ್ಟಿಟ್ಯೂಯೆನ್ಸಿಗಳಲ್ಲಿ ತೊಂದರೆ ಇರುತ್ತದೆ. 4–5 ದಿವಸಗಳಿಂದ ಒಂದೇ ಸಮನೆ ಕೇಳುತ್ತಿದ್ದಾರೆ. ಅವರು ಅದನ್ನೇ ಹೇಳುತ್ತಾರೆ. ಅವರು ಹಿಂದೆ ನಡೆದದ್ದು ಹೇಳುವುದಕ್ಕೆ ಹೊರಟರು, ಇವರು ಮುಂದಾಗುವುದನ್ನು ಭಾವಿಸಿಕೊಂಡಿದ್ದರಿಂದ ಈ ಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು ಅವರಿಗೆ ನಮ್ಮ ಪರವಾಗಿ ತಾವು ಅಪೀಲ್ ಮಾಡಬೇಕು. ಅವರು ಬರಬೇಕು. ಮತ್ತೆ ಈ ವಿಷಯಕ್ಕೆ ಬಹಳ ಉತ್ತರವಿಲ್ಲ. ನಮ್ಮ ಗೆಳೆಯರಾದ ಸತ್ಯನಾರಾಯಣರವರು ಒಳ್ಳೆಯ ಉತ್ತರ ಹೇಳುತ್ತಾರೆ. ಆದರೆ, ಮುಖ್ಯಮಂತ್ರಿಗಳು ಎರಡು ಲೈನ್ ಉತ್ತರಿಸಿದರೆ ಈ ಸಮಸ್ಯೆ ಬಗೆಹರಿಯುತ್ತದೆ. ಇದು ನನ್ನ ಅಭಿಪ್ರಾಯ. ಇದರಲ್ಲಿ ನಾವು ಸ್ವಂತಕ್ಕೆ ಯಾರು ಕೇಳುತ್ತಿಲ್ಲ. ಇದರಲ್ಲಿ ಒಂದುಕೋಟಿ, 50 ಲಕ್ಷ, 2 ಕೋಟಿ ರೂಪಾಯಿ ಕೊಡುತ್ತೀರೋ, ಕ್ಷೇತ್ರಕ್ಕೆ ನೀರು ಕೊಡುವ ಜವಾಬ್ದಾರಿ ತಮ್ಮದಿದೆ. ಒಬ್ಬ ಅಧಿಕಾರಿ ಕೆಳಗಡೆ ಕೊಟ್ಟಿರುವ ವ್ಯವಸ್ಥೆಯನ್ನು ನಾವು ಹೋಗಿ ಆ ಅಧಿಕಾರಿಗೆ ನಮ್ಮ ಊರಿಗೆ ನಲ್ಲಿ ಹಾಕಿಸು, ಆ ಊರಿಗೆ ನಲ್ಲಿ ಹಾಕಿಸು ಎನ್ನುವುದಕ್ಕಿಂತ ಶಾಸಕರ ಅಧ್ಯಕ್ಷತೆಯಲ್ಲಿ ಆ ಅಧಿಕಾರಿ ಕೆಲಸ ಮಾಡಲಿ. ಸಂವಿಧಾನಾತ್ಮಕವಾದ ಅಧಿಕಾರ ಎಲ್ಲಾ ಅವರಿಗೇ ಇರುತ್ತದೆ. ನಾವು ಸಜೆಷನ್ ಕೊಡುತ್ತೇವೆ. ನಮಗೆ ಗೊತ್ತಿದೆ, ಈಗ ಗ್ರಾಮ ಪಂಚಾಯತ್‌ಗಳು ಮುಗಿದಿವೆ. ಚುನಾವಣೆಗೆ ಕ್ಯಾಲೆಂಡರ್ ಹಾಕಿದ್ದಾರೆ. ಹೇಳುವವರು ಯಾರು ಎನ್ನುವುದು ಬೇಕಲ್ಲವೇ? ಅದು ತಪ್ಪು ಏನಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾನು ರಿಕ್ವೆಸ್ಟ್ ಮಾಡುತ್ತೇನೆ, ಅವರು ಈ ಸದನದ ಗೌರವವನ್ನು ಎತ್ತಿಹಿಡಿದು, ವಿರೋಧ ಪಕ್ಷದ ನಾಯಕರನ್ನು ಅವರನ್ನೆಲ್ಲಾ ಒಳಗೆ ಕರೆಸಿ, ಎರಡು ಮಾತಿನಲ್ಲಿ ಉತ್ತರ ಕೊಡಬೇಕು. ಆಮೇಲೆ ನಾನು ವಾಟಾಳ್ ನಾಗರಾಜ್‌ರವರಲ್ಲಿ ರಿಕ್ವೆಸ್ಟ್ ಮಾಡುತ್ತೇನೆ, ಅವರು ಇಲ್ಲಿ ಇರುವುದು ನಾವು ಇಲ್ಲಿ ಕುಳಿತಿರುವುದು, ಗೌರವ ತರುವುದಿಲ್ಲ. ಅವರು, ನಾವು ಜೊತೆ. ಮಾನ್ಯ ವಾಟಾಳ್ ನಾಗರಾಜ್‌ರವರೆ ನಮ್ಮದೂ ಸ್ವಲ್ಪ ತೆಗೆದುಕೊಳ್ಳಿ. ರಿಪ್ಲೈ ಮಾಡಲು ಅವಕಾಶ ಕೊಡಬೇಕಾಗಿತ್ತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಅವರು ಉತ್ತರ ಹೇಳಿ ಮುಗಿಸಲಿ, ನಾವೂ ನಿಮ್ಮ ಜೊತೆಗೇ ಬರುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಅವರು ಉತ್ತರ ಹೇಳುವುದಕ್ಕೆ ಬಿಡಬೇಕಾಗಿತ್ತು. ಸಂವಿಧಾನಾತ್ಮಕವಾಗಿ ನಾವು ಎಷ್ಟು ಮಾತನಾಡುತ್ತೇವೆ, ಉತ್ತರ ಹೇಳುವುದಕ್ಕೆ ಅವರಿಗೂ ಅಷ್ಟೇ ಹಕ್ಕಿದೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರಗೆ ನಡೆದರು)

ಶ್ರೀ ಜೆ.ಸಿ.ಮಾಧುಸ್ವಾಮಿ:– ನೀವಿಲ್ಲಿ ಬರಬೇಕು. ಇದು ಚೆನ್ನಾಗಿ ಕಾಣುವುದಿಲ್ಲ. ದಯವಿಟ್ಟು, ನಾನು ತಮ್ಮ ಮೂಲಕ ಕೇಳುತ್ತೇನೆ, ಎರಡು ಮಾತಿನಲ್ಲಿ ಹೇಳಬೇಕು. ಒಂದು, ಅವರನ್ನು ಒಳಗೆ ಕರೆಸಬೇಕು. ಇನ್ನೊಂದು ಮಾತನ್ನು ತಾವು ಹೇಳಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ ....ನೀವು ಹೇಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ:– ಇದು ಒಂದು ಸ್ಟೇಟ್ ಆಕ್ಟ್.

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಮತ್ತು ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಇವತ್ತು ಯಾವುದಾದರೂ ಪ್ರಶ್ನೆ ರಾಜ್ಯದ ಬಗ್ಗೆ. ಜನರ ಸಮಸ್ಯೆಗಳ ಬಗ್ಗೆ ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶವಿದೆ. ಇದರ ಬಗ್ಗೆ ಸರ್ಕಾರ ತರಾತುರಿಯಾಗಿ ಉತ್ತರ ಕೊಟ್ಟು ಹೋಗುವಂಥ ರೀತಿಯಲ್ಲಿ ನಾವು ಬಂದಿಲ್ಲ. ಈಗಾಗಲೇ ಮಾನ್ಯ ಸತ್ಯನಾರಾಯಣರವರು ಹೊಸದಾಗಿ ಮಂತ್ರಿಗಳಾಗಿದ್ದಾರೆ. ಅವರೂ ಕೂಡ ಮೊದಲೂ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಇವತ್ತು ಅವರು ಉತ್ತರ ಕೊಡುತ್ತಿದ್ದಾರೆ. ನಾನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಹೇಳಿದ್ದೇನೆ. ಕೆಲವು ಶಾಸಕರ ಬಗ್ಗೆ ಅವರ ಬಗ್ಗೆ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ, ಮತ್ತೆ ಬಿಜೆಪಿಯವರು ಬರಲಿ. ನಮ್ಮ ಅಭ್ಯಂತರವಿಲ್ಲ. ಇದಕ್ಕೇನಾದರೂ ಸಂಘರ್ಷ ಮಾಡಬೇಕೆಂದು ಅವರು ವಾಕ್–ಔಟ್ ಮಾಡಿದರೆ, ನಾವು ಹೇಳಿದ್ದು ಹೇಳಿ ಮನೆಗೆ ಹೋಗುತ್ತೇವೆ ಎನ್ನುವುದಲ್ಲ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕಾಗಿದೆ. ಇವತ್ತು ಅವರು ಉತ್ತರ ಹೇಳಲಿ . ಉತ್ತರ ಹೇಳಿದ ಮೇಲೆ ನಾವೂ ಕೂಡ ಮಧ್ಯೆ ಪ್ರವೇಶಿಸಿ ಏನಾದರೂ ಹೇಳುವುದಿದ್ದರೆ ಹೇಳೋಣ. ನಾನು ಈಗಾಗಲೇ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತಿದ್ದೆ. ಹಾಗೆ ಮಾತನಾಡುವ ಸಂದರ್ಭದಲ್ಲಿ, ವಾಕ್–ಔಟ್ ಮಾಡುತ್ತಾರೆಂದು ತಿಳಿದು ನಾನು ಇಮ್ಮೀಡಿಯಟ್ ಆಗಿ ಇಲ್ಲಿಗೆ ಬಂದೆ. ತಾವು ಅವರನ್ನು ಕರೆಸಬಹುದು. ಅವರು ಮತ್ತೆ ಮಾತನಾಡಲಿ. ಸರ್ಕಾರದ ಪರವಾಗಿ ಬರುವ ಉತ್ತರ ಕೇಳಲಿ. ಕೇಳಿದ ಮೇಲೆ, ಏನಾಗಬೇಕಾಗಿದೆ ಎಂಬುದಕ್ಕೆ ಸ್ಪಷ್ಟೀಕರಣವನ್ನು ನಾನೂ ಕೂಡ ಕೊಡುತ್ತೇನೆ. ಅವರಿಗೆ ಸಮಾಧಾನ ತರುವ ರೀತಿಯಲ್ಲಿ ಏನೇನು ಪ್ರಶ್ನೆಗಳನ್ನು ಎತ್ತಿದ್ದಾರೆ ಅದರ ಬಗ್ಗೆ ಪೂರ್ವಭಾವಿಯಾಗಿ ಮಾತನಾಡಿಕೊಂಡು ಬಂದಿದ್ದೇನೆ. ಆದರೆ, ಇದೇ ತರಹ ವಾಕ್–ಔಟ್ ಮಾಡಿ ಹೋದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಸುಮ್ಮನೆ ವಾಕ್–ಔಟ್ ಮಾಡಿ ಹೋದರೆನ್ನುವ ಪ್ರಚಾರ ಸಿಗಬಹುದೇ ಹೊರತಾಗಿ ಸಮಸ್ಯೆಗಳು

ಬಗೆಹರಿಯುವುದಿಲ್ಲ. ಮಾನ್ಯ ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು, ರಮೇಶ್ ಕುಮಾರ್‌ರವರು ಹೇಳಿದ್ದಾರೆ. ತಾವು ಕೂಡ ಅವರಿಗೆ ಹೇಳಿ. ಅವರೂ ಬರಲಿ. ಬಂದು ಅವರು ಉತ್ತರ ಕೇಳಲಿ. ನಾವು ಕೂಡ ಸದನದಲ್ಲೇ ಕುಳಿತಿರುತ್ತೇವೆ. ಉತ್ತರ ಕೊಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:–ಮಾನ್ಯ ಅಧ್ಯಕ್ಷರೆ ತಾವು ಅವರನ್ನು ಕರೆಸಬೇಕು. ಏಕೆಂದರೆ, ಒಂದು ಹಂತದಲ್ಲಿ ನಿರ್ಣಯವಾಗಿ ಯಾವುದೋ ಪ್ರೆಸ್ಟೀಜ್‌ಗೆ, ಹಳ್ಳಿಗಾಡಿನ ಜನರಿಗೆ, ರೈತರಿಗೆ ಅನ್ಯಾಯವಾಗುವುದು ಬೇಡ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಳಕ್ಕೆ ಆಗಮಿಸಿದರು)

ಶ್ರೀ ವಾಟಾಳ್ ನಾಗರಾಜ್:– ಈಗ ಸದನವನ್ನು ತಾವು 10 ನಿಮಿಷ ಮುಂದೂಡಿ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ತಮ್ಮ ಕಾರ್ಯಾಲಯದಲ್ಲಿ ಮಾತುಕತೆಯಾದ ನಂತರ ನಾವೀಗ ಅವರ ಜೊತೆ ಮಾತನಾಡಿದ್ದೇವೆ. ದಯವಿಟ್ಟು ನನ್ನ ಮನವಿಯನ್ನು ಸ್ವೀಕರಿಸಿ ಈಗ ಸದನವನ್ನು 10 ನಿಮಿಷ ಮುಂದಕ್ಕೆ ಹಾಕಿ. ಅಲ್ಲಿ ಮಾತನಾಡಿ ತೀರ್ಮಾನ ತೆಗೆದುಕೊಳ್ಳೋಣ.

ಅಧ್ಯಕ್ಷರು:– ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 10.50ಕ್ಕೆ ಮುಂದೂಡಲ್ಪಟ್ಟಿತು)

(ಸದನವು ಪುನಃ 11 ಗಂಟೆ 31 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠದಲ್ಲಿದ್ದರು)

2) ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಅಧಿವೇಶನ ಪ್ರಾರಂಭವಾದಾಗಿನಿಂದ ಈ ರಾಜ್ಯದ ಜನರ ಜ್ವಲಂತ ಸಮಸ್ಯೆಗಳನ್ನು ತೆಗೆದುಕೊಂಡು ಅದು ಕುಡಿಯುವ ನೀರು, ವಿದ್ಯುತ್ ಕ್ಷಾಮವಿರಬಹುದು, ಬೇರೆ ಸಮಸ್ಯೆಗಳು ಇರಬಹುದು, ಅದರ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ. ಒಂದು ನಿಮಿಷ ಧರಣಾ ಮತ್ತು ಸತ್ಯಾಗ್ರಹ ಮಾಡುವುದಕ್ಕೆ ಅವಕಾಶವನ್ನು ಕೊಡದೆ ಅಧ್ಯಕ್ಷರು ನಮಗೆ ಸಂಪೂರ್ಣವಾಗಿ ಸಹಕಾರವನ್ನು ಕೊಟ್ಟು ಎಲ್ಲಾ ಶಾಸಕರುಗಳಿಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಗಂಭೀರವಾದಂತಹ ಕಳೆದ 7–8 ದಿನಗಳಲ್ಲಿ ಅನೇಕ ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ. ಈ ಅಧಿವೇಶನವನ್ನು ರಾಜ್ಯಪಾಲರ ವಂದನಾನಿರ್ಣಯದ ಬಗ್ಗೆ ಕರೆದಿದ್ದರೂ ಸಹ ಕುಡಿಯುವ ನೀರು ಮತ್ತು ವಿದ್ಯುತ್ ಕ್ಷಾಮದ ಬಗ್ಗೆ ಆದ್ಯತೆಯನ್ನು ಕೊಟ್ಟು ಈ ಭಾಗದ ಎಲ್ಲಾ ಶಾಸಕರುಗಳೂ ಕೂಡ ಮಾತನಾಡಿದ್ದೇವೆ. ನಮ್ಮ ಅಪೇಕ್ಷೆ ಇಷ್ಟೆ, ಶಾಸಕರು ಬೇರೆ ಎಲ್ಲರಿಗಿಂತ ಬಹಳ ಎತ್ತರದವರು. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ವಿಶ್ವಾಸವಿಲ್ಲ ಈ ಭಾವನೆ ನಾಡಿನ ಜನರಿಗೆ ಬರುವುದು ಬೇಡ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಾಗಬೇಕು, ಕಳೆದ 3–4 ತಿಂಗಳಿಂದ ನಿಮ್ಮ ನೂರಾರು ಕೋಟಿ ರೂಪಾಯಿಗಳು ಕುಡಿಯುವ ನೀರಿಗಾಗಲೀ, ಅಲ್ಲಿ ಪೈಪ್ಡ್ ವಾಟರ್ ಸಪ್ಲೈಗಾಗಲೀ ಬೋರ್‌ವೆಲ್ ತೆಗೆಯುವುದಕ್ಕಾಗಲೀ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಲೀ ಬೇರೆ ಬೇರೆ ಕಾರಣಕ್ಕೋಸ್ಕರ ಯಾವುದೇ ಪ್ರಾಮಾಣಿಕವಾದ ಪ್ರಯತ್ನಗಳೂ